5231(6024) ಡಾ: ಅನ್ನದಾನಿ ಕೆ.(ಮಳವಳ್ಳಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಅಬಕಾರಿ ಇಲಾಖೆಯಲ್ಲಿ ರೋಸ್ಟರ್ ಪದ್ಧತಿಯನ್ನು ಸೂಕ್ತ ಪ್ರಮಾಣದಲ್ಲಿ ಅನುಸರಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ, ಕಾರಣಗಳೇನು;

ಇ) ಅಬಕಾರಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜೇಷ್ಠತೆಯನ್ನು ಪರಿಗಣಿಸಿ ಕಾಲಕಾಲಕ್ಕೆ ಪದೋನ್ನತಿಯನ್ನು ನೀಡಲಾಗಿದೆಯೇ;

ಈ) ನೀಡಲಾಗಿದ್ದಲ್ಲಿ ಪೂರ್ಣ ಪ್ರಮಾಣದಲ್ಲಿ ನೀಡಲಾಗಿದೆಯೇ;

ಉ) ಇಲಾಖೆಯಲ್ಲಿರುವ ಎಲ್ಲಾ ವೃಂದಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

ಊ) ಹಾಗಿದ್ದಲ್ಲಿ, ಅರ್ಹ ಅಭ್ಯರ್ಥಿಗಳು ಇದ್ದಾಗ್ಯೂ ಪದೋನ್ನತಿಯಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಈ ಪ್ರಶ್ನೆ ಉದ್ಭವಿದುವುದಿಲ್ಲ.

ಇ) ಹೌದು

ಈ) ಅರ್ಹ ಅಭ್ಯರ್ಥಿಗಳು ಇಲ್ಲದ ಕಾರಣ ಪೂರ್ಣ ಪ್ರಮಾಣದಲ್ಲಿ ಮೀಸಲು ಹುದ್ದೆಗಳನ್ನು ತುಂಬಲಾಗಿಲ್ಲ.

ಉ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಊ) ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ ನಿಯಮಾನುಸಾರ ಪದೋನ್ನತಿ ನೀಡಲಾಗಿದೆ. ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿರುವುದಿಲ್ಲ.

ಅನುಬಂಧ

ಕ್ರ.ಸಂ.	ಹುದ್ದೆಯ ಹೆಸರು	ಎಸ್.ಸಿ.	ಎಸ್.ಟಿ
1	ಅಬಕಾರಿ ಉಪ ಅಧೀಕ್ಷಕರ ಹುದ್ದೆಯಿಂದ ಅಬಕಾರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ	8	5
2	ಅಬಕಾರಿ ನಿರೀಕ್ಷಕರ ಹುದ್ದೆಯಿಂದ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ಪದೋನ್ನತಿ	3	3
3	ಕಚೇರಿ ಅಧೀಕ್ಷಕರ ಹುದ್ದೆಯಿಂದ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ಪದೋನ್ನತಿ	1	–
4	ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಬಕಾರಿ ನಿರೀಕ್ಷಕರ ಹುದ್ದೆಗೆ ಪದೋನ್ನತಿ	1	1
5	ಅಬಕಾರಿ ಉಪ ನಿರೀಕ್ಷಕರ ಹುದ್ದೆಯಿಂದ ಅಬಕಾರಿ ನಿರೀಕ್ಷಕರ ಹುದ್ದೆಗೆ ಪದೋನ್ನತಿ	–	1

6	ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಕಚೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ	3	–
7	ಶೀಘ್ರಲಿಪಿಗಾರರ ಹುದ್ದೆಯಿಂದ ಕಛೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ	1	1
8	ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ	1	1
9	ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ	–	1
10	ಅಬಕಾರಿ ರಕ್ಷಕರ ಹುದ್ದೆಯಿಂದ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಪದೋನ್ನತಿ	1	–
11	ವಾಹನ ಚಾಲಕರ ಹುದ್ದೆಯಿಂದ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಪದೋನ್ನತಿ	1	1

5232(6025) ಡಾ॥ ಅನ್ನದಾನಿ (ಮಳವಳ್ಳಿ) ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಳವಳ್ಳಿ ಕ್ಷೇತ್ರವ್ಯಾಪ್ತಿಯ ಶಿಂಷಾ ಕಿರುಜಲ ವಿದ್ಯುತ್ ಯೋಜನೆಯ ಈ ವರೆಗಿನ ಪ್ರಗತಿಯ ವಿವರಗಳೇನು.

ಆ) ಈ ಯೋಜನೆ ಪ್ರಾರಂಭದಲ್ಲಿ ಎಷ್ಟು ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗೆ ಅನುಮತಿಸಲಾಗಿತ್ತು.

ಇ) ಈಗ ಅದನ್ನು ಹೆಚ್ಚಿಸಲಾಗಿರುವುದು ನಿಜವೇ ಹಾಗೂ ನಿಜವಾಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು;

ಈ) ಇಂಥ ಕಿರುಜಲವಿದ್ಯುತ್ ಯೋಜನೆಗೆ ಮೊದಲು ನಿಗದಿಪಡಿಸಿದ ಸಾಮರ್ಥ್ಯಕಿಂತ ಹೆಚ್ಚು ಸಾಮರ್ಥ್ಯಕ್ಕೆ ಅನುಮತಿಸುವಲ್ಲಿ ಅನುಸರಿಸಬೇಕಾದ ನಿಯಮಗಳೇನು(ಅದನ್ನು ನಿರ್ಧರಿಸಿ ಅನುಮತಿ ನೀಡುವ ಪ್ರಕ್ರಿಯೆಯ ವಿವರಗಳನ್ನು ನೀಡುವುದು)

ಉ) ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಅನುಮತಿ ನೀಡಿರುವುದು ಮತ್ತು ಅನುಮತಿ ನೀಡಿಕೆಯಲ್ಲಿ ರೀತಿನೀತಿಗಳನ್ನು ಅನುಸರಿಸದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ಹಾಗೂ ಗಮನಿಸಿದ್ದಲ್ಲಿ ಈ ಕುರಿತಾದ ಸರ್ಕಾರದ ನಿಲುವುಗಳೇನು ;

ಊ) ಈ ಯೋಜನೆಯಲ್ಲಿ ಹೆಚ್ಚುವರಿ ಸಾಮರ್ಥ್ಯದ ಉತ್ಪಾದನೆಗಾಗಿ ಹೆಚ್ಚುವರಿ ಭೂಮಿ ಇತ್ಯಾದಿಗಳು ಸ್ವಾಧೀನಪಡಿಸಿಕೊಳ್ಳದಿರಲು ಮತ್ತು ಅಲ್ಲಿನ ಜಲಪಾತ ಮತ್ತು ನಯನಮನೋಹರ